## ಲಕ್ಷ ವರ್ಷ ಕಂಡ ಸಿಡಿಲು ಫಡಿ



ವಾತಾಪಿ ನಗರ ಬಾದಾಮಿ ಚಾಲುಕ್ಯರ ರಾಜಧಾನಿಯಾಗಿತ್ತು. ಗ್ರೀಸ್ ದೇಶದ ಭೂಗೋಳ ತಜ್ಞ ಟಾಲಮಿಯ 'ಬದೊಮೊಯಿ' ಎಂದು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಚಾಲುಕ್ಯರ ಕಾಲದ ಅವಶೇಷಗಳನ್ನು ಈಗಲೂ ಸಹ ಬಾದಾಮಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಣಬಹುದು. ಬಾದಾಮಿಯ ಸಾಲುಮರದ ತಿಮ್ಮಕ್ಕ ವೃಕ್ಷೋಧ್ಯಾನ ಮಾರ್ಗವಾಗಿ ಐದು ಕಿ.ಮೀ. ಕಚ್ಚಾ ರಸ್ತೆಯಲ್ಲಿ ಸಾಗಿದರೆ ನಮಗೆ ಪ್ರಾಗೈತಿಹಾಸಿಕ ಕಾಲದ ಸಿಡ್ಲಪಡಿ (ಸಿಡಿಲು ಫಡಿ) ಗುಹೆಯಾಕಾರದ ಬೃಹತ್ ಬಂಡೆಗಲ್ಲು ಕಾಣಿಸುತ್ತದೆ.

ಬಂಡೆಗಲ್ಲಿನ ಮೇಲ್ಭಾಗದಲ್ಲಿ ಅಗಲವಾದ ಮೂರು ರಂಧ್ರಗಳಿವೆ. ಅವು ಸಿಡಿಲು ಬಡಿದು ಉಂಟಾದ ರಂಧ್ರಗಳು ಎಂದು ಹೇಳುತ್ತಾರೆ. ಅದಕ್ಕೇ ಅದನ್ನು ಸಿಡಿಲು ಫಡಿ ಅಂತ ಕರೆಯುತ್ತಾರೆ. ಇಲ್ಲಿ ದೊರೆತ ಪ್ರಾಗೈತಿಹಾಸಿಕ ಅವಶೇಷಗಳನ್ನು ಆಧರಿಸಿ ಸುಮಾರು ಒಂದು ಲಕ್ಷ ವರ್ಷಗಳ ಹಿಂದೆ ಆ ಗುಹೆಯಲ್ಲಿ ಮನುಷ್ಯ ವಾಸ ಮಾಡುತ್ತಿದ್ದ ಎಂದು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಂದಹಾಗೆ ಬಾದಾಮಿ ಬಾಗಲಕೋಟೆ ಜಿಲ್ಲೆಯಲ್ಲಿದೆ.

—ಚಂದ್ರಕಾಂತ ಮ. ತಾಳಿಕೋಟಿ



## ಶತಾಯುಷಿ ಸೇನಾನಿ!

ಸ್ವಾತಂತ್ರ್ಯ ಹೋರಾಟಗಾರ ಹುಲಿಕಲ್ ಮುಂಡಿಗೆಮನೆ ನಾಗಭೂಷಣರಾವ್ 1921ರ ಜೂನ್ 20 ರಂದು ಕುಂದಾಪುರ ಸಮೀಪ ಗುಂಡ್ಮಿಯಲ್ಲಿ ಜನಿಸಿದವರು. ಮುಂದಿನ ಸ್ವಾತಂತ್ರ್ಯ ದಿನೋತ್ಸವದ ಹೊತ್ತಿಗೆ ತಮ್ಮ ಬದುಕಿನ ನೂರು ವಸಂತಗಳನ್ನು ಪೂರೈಸಲಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲೆ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಇವರು ಶಿವಮೊಗ್ಗ ಜೈಲಿನಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಜೊತೆ ಸೆರೆಮನೆ ವಾಸ ಅನುಭವಿಸಿದ್ದರು. ಸಮಾಜವಾದಿ ಶಾಂತವೇರಿ ಗೋಪಾಲ ಗೌಡ ಮತ್ತು ನ್ಯಾಯಾಧೀಶ ಎನ್.ಡಿ. ವೆಂಕಟೇಶ್ ಅವರ ಜೊತೆ ಸೇರಿ ತೀರ್ಥಹಳ್ಳಿ ಜೇಸಿಯ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆಯಲ್ಲಿ ಕಾನೂನುಭಂಗ ಚಳವಳಿಗೆ ಸಂಬಂಧಿಸಿದಂತೆ ಅವರು ನೀಡುವ ವಿವರಗಳು ರೋಮಾಂಚನಕಾರಿ. ಗಾಂಧಿ ಕಂಡ ರಾಮರಾಜ್ಯ ನನಸಾಗದಿರಲು ಜನರಲ್ಲಿ ನೈತಿಕತೆ ಮಾಯವಾಗಿರುವುದೇ ಕಾರಣ ಎಂದು ಶ್ರಿಯುತರು ವಿಷಾದಿಸುತ್ತಾರೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಹುಲಿಜೇಡ ಎಚ್ಚರ!

ಸಾಮಾನ್ಯವಾಗಿ ಅಡಿಕೆ ಬೆಳೆಯುವ ಪ್ರದೇಶದ ಜನರಿಗೆ ಹುಲಿಜೇಡ ಪರಿಚಿತ. ಅಡಿಕೆ ಗೊನೆ, ಬಾಳೆಗೊನೆಗಳೇ ಅದರ ವಾಸಸ್ಥಾನ. ಕೆಲಸ ಮಾಡುವ ಕೃಷಿಕಾರ್ಮಿಕರು ಒಂದಲ್ಲ ಒಂದು ಬಾರಿ ಅದರ ದರ್ಶನ ಪಡೆದಿರುತ್ತಾರೆ. ಈ ವಿಷಕಾರಿ ಕೀಟದಿಂದ ಕಚ್ಚಿದ ಪರಿಣಾಮ ಕೆಲವರು ತೊಂದರೆಯನ್ನೂ ಅನುಭವಿಸಿದ್ದಾರೆ.

ಸಾಮಾನ್ಯ ಜೇಡನಿಗಿಂತ ದೊಡ್ಡದಾಗಿ, ಮೈತುಂಬಾ ರೋಮಗಳನ್ನು ಹೊಂದಿರುವ ಈ ಕೀಟ ವಿಷಕಾರಿ. ನೋಡಲೂ ಕೂಡ ಭಯಾನಕವಾಗಿ ಕಾಣಿಸುತ್ತದೆ. ಇದೇನಾದರೂ ಕಚ್ಚಿದ ಪಕ್ಷದಲ್ಲಿ ನಿರ್ಲಕ್ಷ ಮಾಡದೆ ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸುವುದು ಒಳ್ಳೆಯದು.

—ಜಿ.ಎಂ. ಬೊಮ್ನಳ್ಳಿ, ಶಿರಸಿ

